ದಾವಣಗೆರೆ ವಿಶ್ವವಿದ್ಯಾನಿಲಯ
ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ,ದಾವಣಗೆರೆ-577002
E-mail: registrarevaluation@gmail.com ದೂ.ಸಂಖ್ಯೆ : 08192-208420, 208104

ಸಂಖ್ಯೆ:ದಾವಿ/ಪವಿ/ಯು.ಜಿ/ಬಿ.ಇಡಿ/ /2016-17 ದಿನಾಂಕ: 29-11-2016

# ಪ್ರಕಟಣೆ

ವಿಷಯ: ಡಿಸೆಂಬರ್-2016ರಲ್ಲಿ ನಡೆಯುವ ಬಿ.ಇಡಿ 2 ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 26-11-2016

*****

ಬಿ.ಇಡಿ ಸೆಮಿಸ್ಟರ್ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳ ಮೊದಲೇ ನಡೆಸತಕ್ಕದ್ದು, ಮತ್ತು ಲಿಖಿತ ಪರೀಕ್ಷೆಗಳು ಡಿಸೆಂಬರ್-2016 ಪ್ರಾರಂಭವಾಗುತ್ತವೆ. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು. ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

## ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು

| | | |
|---|---|---|
| ದಂಡಶುಲ್ಕವಿಲ್ಲದೆ | ------------------- | 30-11-2016 ರಿಂದ 08-12-2016 ರವರೆಗೆ |
| ದಂಡಶುಲ್ಕ ರೂ.100 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------- | 09-12-2016 ರಿಂದ 13-12-2016 ರವರೆಗೆ |
| ದಂಡಶುಲ್ಕ ರೂ.500 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------- | 14-12-2016 ರಿಂದ 16-12-2016 ರವರೆಗೆ |

ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

## ಶುಲ್ಕದ ವಿವರಗಳು:

ಬಿ.ಇಡಿ ಸೆಮಿಸ್ಟರ್ ಸ್ಕೀಂ:-

| | | |
|---|---|---|
| 01 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ. 655.00<br>ಅಂಕಪಟ್ಟಿ ಶುಲ್ಕ ರೂ. 140.00<br>------------<br>ಒಟ್ಟು ಶುಲ್ಕ ರೂ. 795.00 |
| 02 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ<br>(ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.655/-ಕ್ಕೆ ಒಳಪಟ್ಟು) | ರೂ. 140.00 |
| 03 | ಪ್ರಾಯೋಗಿಕ ಪರೀಕ್ಷೇಗೆ ಪ್ರತಿ ಪತ್ರಿಕೆಗೆ (ಫೇಲ್ ವಿದ್ಯಾರ್ಥಿಗಳಿಗೆ) | ರೂ. 85.00 |

ಪ್ರವೇಶಾತಿ ಸಂದರ್ಭದಲ್ಲಿ ಪದವಿ ಪ್ರಮಾಣಪತ್ರಕ್ಕಾಗಿ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳು ಅಂತಿಮ ಸೆಮಿಸ್ಟರ್‌ಪರೀಕ್ಷಾ ಶುಲ್ಕದ ಜೊತೆಯಲ್ಲಿಯೇ ಕಡ್ಡಾಯವಾಗಿ ಪದವಿ ಪ್ರಮಾಣ ಪತ್ರದ ಶುಲ್ಕವನ್ನು ಈ ಕೆಳಕಂಡಂತೆ ಪ್ರತ್ಯೇಕವಾಗಿ ಪಾವತಿಸುವುದು.

| ಪ್ರಮಾಣ ಪತ್ರದ ಶುಲ್ಕ ಅರ್ಜಿ ಶುಲ್ಕ ಸೇರಿದಂತೆ | ಸಾಮಾನ್ಯ | SC/ST |
|---|---|---|
| | ರೂ.550.00 | ರೂ.440.00 |

## ವಿದ್ಯಾರ್ಥಿಗಳಿಗೆ ಸೂಚನೆ:-

1 ಅ) ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ Freshers ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ.140.00 (ಒಂದು ನೂರ ನಲವತ್ತು ಮಾತ್ರ) ನ್ನು ಮಾತ್ರ ಪಾವತಿಸಬೇಕು. (ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು)

2 ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪ್ರವರ್ಗ-1ರ Freshers ವಿದ್ಯಾರ್ಥಿಗಳು ಹಾಗೂ ರೂ,1,00,000/-ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2ಎ,2ಬಿ,3ಎ,3ಬಿ ಸೇರಿದ Freshers ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ.ಆದರೆ ಅಂತಹ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್ / ವರ್ಷದಲ್ಲಿ ಎಲ್ಲಾ ವಿಷಯಗಳಲ್ಲಿ ಖಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಅಂಕಪಟ್ಟಿ ಶುಲ್ಕ ರೂ.150/- (ಒಂದು ನೂರ ಐವತ್ತು ಮಾತ್ರ)ನ್ನು ಮಾತ್ರ ಪಾವತಿಸಬೇಕು.ಮಾಹಿತಿಗಾಗಿ ಸರ್ಕಾರಿ ಆದೇಶದ ಪ್ರತಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಿದೆ.

3 ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.

4 ಶುಲ್ಕ ವಿನಾಯ್ತಿ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳು, ಆನ್ ಲೈನ್ ಮೂಲಕ ಶುಲ್ಕ ವಿನಾಯಿತಿಗೆ ಅರ್ಜಿ ಸಲ್ಲಿಸಿ, ಆನ್ ಲೈನ್ ಪ್ರತಿಯನ್ನು ಪ್ರಾಚಾರ್ಯರಿಗೆ ಸಲ್ಲಿಸಬೇಕು.ಒಂದು ಪ್ರತಿಯನ್ನು ಪರೀಕ್ಷಾ ಅರ್ಜಿಯೊಂದಿಗೆ ಲಗತ್ತಿಸಬೇಕು.ಶುಲ್ಕ ವಿನಾಯ್ತಿಗೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಪೂರ್ಣ ಶುಲ್ಕ ಪಾವತಿಸಬೇಕು.

5 ಇ) ಪ್ರವರ್ಗ 2B ಗೆ ಸೇರಿದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣಪರೀಕ್ಷಾಶುಲ್ಕವನ್ನು ಪಾವತಿಸಲೇಬೇಕು. ಕಾರಣ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ಎಂಡಬ್ಲ್ಯುಡಿ:400:ಎಂಡಿಎಸ್–2014 ದಿನಾಂಕ:17–10–2014 ಇಲಾಖೆ,ಬೆಂಗಳೂರು.ಈ ಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.

6 ಈ) ಪರಿಶಿಷ್ಟ ಜಾತಿಃ ಪರಿಶಿಷ್ಟ ಪಂಗಡ ಹಾಗೂ ರೂ.500–00 ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ.

## ಪ್ರಾಚಾರ್ಯರಿಗೆ ಸೂಚನೆ:–

1. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ ಇತರ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, ಸರ್ಕಾರ ಆದೇಶ ಸಂಖ್ಯೆ:ಹಿವಿಕ:589:ಬಿಎಂಎಸ್:2013 ಇಲಾಖೆ, ಬೆಂಗಳೂರು.ಇವರ ದಿನಾಂಕ:05–10–2013ರ ಪ್ರಕಾರ ವಿದ್ಯಾರ್ಥಿಗಳಿಗೆ ಶುಲ್ಕಮರುಭರಿಕೆಗೆ ಕ್ರಮ ಕೈಗೊಳ್ಳತಕ್ಕದ್ದು.

2. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ ಇತರ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. ಇವರ ಸಂಖ್ಯೆ:ಹಿಂವಕಇ/ಶುವಿ/ಸಿ.ಆರ್–34 :2014–15 : ದಿನಾಂಕ: 19–09–2014ರ ಪ್ರಕಾರ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಶುಲ್ಕಮರುಭರಿಕೆ ಹಣವನ್ನು ಪ್ರಾಚಾರ್ಯರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕಮರುಭರಿಕೆಯಾದ ನಂತರ ಸದರಿ ಮೊತ್ತವನ್ನು ದಾವಣಗೆರೆ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತ್ತಕ್ಕದ್ದು.

3 ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ (ಪ್ರವರ್ಗ–1,2ಎ,3ಎ,3ಬಿ)ಹಾಗೂ ಇತರೆ ಹಿಂದುಳಿದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಈ ಕಛೇರಿಗೆ ಸಲ್ಲಿಸತ್ತಕ್ಕದ್ದು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಇದೇ ಮಾದರಿಯಲ್ಲಿ ಸಲ್ಲಿಸಬೇಕು.

| ಕ್ರಮ. ಸಂಖ್ಯೆ | ಹೆಸರು | ರಿ.ನಂ. | ಸೆಮಿಸ್ಟರ್ | ಪ್ರವರ್ಗ(Categary) | ಮರುಭರಿಕೆಯಾಗಬೇಕಾದ ಪರೀಕ್ಷಾ ಶುಲ್ಕ |
|---|---|---|---|---|---|
| 1. | | | | | |

ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.

4. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಚಾರ್ಯರು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿವೇತನದಲ್ಲಿ ಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾನಿಲಯದ ನಿಧಿಗೆ ಡಿ.ಡಿ.ಮೂಲಕ ಪಾವತಿಸತಕ್ಕದ್ದು[ಹೆಚ್ಚಿನ ಕಾಲೇಜುಗಳು ಕಳೆದ ಸಾಲಿನ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿರುವುದನ್ನು ಗಮನಿಸಿದೆ. ತಕ್ಷಣ ಕ್ರಮ ಜರುಗಿಸುವುದು]

5 ಪಾವತಿಸಬೇಕಾದ ಶುಲ್ಕಕ್ಕೆ ಡಿ.ಡಿಯನ್ನು ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ. ಈ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದಾವಣಗೆರೆ ವಿಶ್ವವಿದ್ಯಾನಿಲಯ ಶಾಖೆ, ದಾವಣಗೆರೆ. ಇಲ್ಲಿಗೆ ಸಂದಾಯವಾಗುವಂತೆ ಪಡೆಯಬೇಕು. ಹಾಗೂ ಈ ಸಂಬಂಧ ಶುಲ್ಕ ಪಾವತಿ ವಿವರಗಳನ್ನು ಈ ಪ್ರಕಟಣೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಸಲ್ಲಿಸಬೇಕು

6 ಶುಲ್ಕವನ್ನು ನಗದು/ಚೆಕ್ ಮೂಲಕ ವಿದ್ಯಾರ್ಥಿಗಳಿಂದ ನೇರವಾಗಿ ಸ್ವೀಕರಿಸುವುದಿಲ್ಲ. ಆದರೆ ಶುಲ್ಕವನ್ನು ವಿದ್ಯಾರ್ಥಿಗಳಿಂದ ನಗದಾಗಿ ಪಡೆದು ಒಟ್ಟು ಶುಲ್ಕಕ್ಕೆ ದಿನಾಂಕ: 09/12/2016 ರಂದು ಒಂದು ಡಿ.ಡಿಯನ್ನು ,ದಿನಾಂಕ: 14/12/2016 ರಂದು ಮತ್ತೊಂದು ಡಿ.ಡಿ ಯನ್ನು ಹಾಗೂ ದಿನಾಂಕ: 17/12/2016 ರಂದು ಕೊನೆಯ ಡಿ.ಡಿಯನ್ನು ಪಡೆದು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಪರೀಕ್ಷಾ ಅರ್ಜಿಯೊಂದಿಗೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಚಲನ್ ಮೂಲಕ ಹಣ ಪಾವತಿಸತಕ್ಕದ್ದಲ್ಲ.

7 ರೂ 500.00 ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಶುಲ್ಕಕ್ಕೆ ಸಂಬಂದಿಸಿದಂತೆ ಪಡೆಯುವ ಡಿ.ಡಿಗಳಿಗೆ ಶುಲ್ಕದ(ಪರೀಕ್ಷೆ/ ದಂಡ ಶುಲ್ಕ) ಮೊತ್ತದಲ್ಲಿಯೇ ಡಿ.ಡಿ ಕಮಿಷನ್ ಕಟಾಯಿಸಲು ಅವಕಾಶವಿರುವುದಿಲ್ಲ. ವಿದ್ಯಾರ್ಥಿಗಳು ಹಣಕಾಸು ಅಧಿಕಾರಿಗಳ ಹೆಸರಿಗೆ ನೇರವಾಗಿ ಡಿ.ಡಿ ತೆಗೆದು ಪ್ರಾಚಾರ್ಯರ ಮೂಲಕ ಸಲ್ಲಿಸತಕ್ಕದ್ದು. (ಕಾಲೇಜಿನಲ್ಲಿ ರಸೀದಿ ಹಾಕತಕ್ಕದ್ದಲ್ಲ.)

8 ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ವಾಪಸ್ ಕೊಟ್ಟಮೇಲೆ ಅವರ ಅರ್ಜಿ ಮತ್ತು ಪ್ರವೇಶ ಪತ್ರಗಳನ್ನು ಆ ಕಾಲೇಜಿನಲ್ಲಿಯೇ ಬೇರ್ಪಡಿಸಿ ಎರಡು ಪ್ರತ್ಯೇಕ ಬಂಡಲ್ ಮಾಡಿ (ಕೋರ್ಸುವಾರು) ಟ್ಯಾಗಿನಿಂದ ಕಟ್ಟಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು.

9 ಅಭ್ಯರ್ಥಿಯು ಭರ್ತಿ ಮಾಡಿದ ಪರೀಕ್ಷಾ ಅರ್ಜಿ, ಪ್ರವೇಶ ಪತ್ರ, ಅಭ್ಯರ್ಥನಾ ಪಟ್ಟಿ, ಸಲ್ಲಿಸಬೇಕು. ಹಾಗೂ ಪರೀಕ್ಷಾ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯ ನೀಡುವ ಸಾಫ್ಟ್‌ವೇರ್ ಸಿ.ಡಿಯಲ್ಲಿ ದಾಖಲಿಸಿ ಕುಲಸಚಿವರು (ಪರೀಕ್ಷಾಂಗ) ಇವರ ಕಛೇರಿಗೆ ಮೇಲಿನ ಎಲ್ಲಾ ದಾಖಲಾತಿಗಳೊಂದಿಗೆ **ದಿನಾಂಕ: 21–12–2016 ರಂದು** ಗುರುವಾರ (ಕಛೇರಿ ವೇಳೆ) ದಾವಣಗೆರೆ ಜಿಲ್ಲಾ ವ್ಯಾಪ್ತಿ ಕಾಲೇಜುಗಳು, ಹಾಗೂ **ದಿನಾಂಕ: 22–12–2016** ರಂದು ಶುಕ್ರವಾರ (ಕಛೇರಿ ವೇಳೆ) ಚಿತ್ರದುರ್ಗ ಜಿಲ್ಲಾ ವ್ಯಾಪ್ತಿ ಕಾಲೇಜುಗಳು ಕಛೇರಿಯಲ್ಲಿ ಸಲ್ಲಿಸಿ ಸ್ವೀಕೃತಿ ಪಡೆಯಬೇಕು.

10 ಆಂತರಿಕ ಅಂಕಗಳ ಮಾರ್ಕ್ಸ್ ಲೀಸ್ಟ್‌ಗಳನ್ನು ಕಡ್ಡಾಯವಾಗಿ ಸಮರ್ಪಕವಾಗಿ ಪರಿಶೀಲಿಸಿ ಸೈದ್ಧಾಂತಿಕ ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಈ ಕಛೇರಿಗೆ ಸಲ್ಲಿಸಬೇಕು. ಫಲಿತಾಂಶ ನೀಡಿದ ನಂತರ ಯಾವುದೇ ತಿದ್ದುಪಡಿ/ ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.(ಆಂತರಿಕ ಅಂಕ ನೀಡಲು ಸಿ.ಡಿಯನ್ನು ಅಭ್ಯರ್ಥಿ ಪಟ್ಟಿಯ ಸಿ.ಡಿ ನೀಡಿದ ತಕ್ಷಣ ನೀಡಲಾಗುವುದು)

11 ಪ್ರಶ್ನೆಪತ್ರಿಕೆ/ಸೈದ್ಧಾಂತಿಕ ಉತ್ತರಪತ್ರಿಕೆಗಳು ಹಾಗೂ ಪ್ರಾಯೋಗಿಕ ಪರೀಕ್ಷೆ ಉತ್ತರಪತ್ರಿಕೆಗಳ ಸಂಬಂಧವಾಗಿ ಬೇಡಿಕೆ ಪಟ್ಟಿಯನ್ನು ಪರೀಕ್ಷಾ ಸಾಫ್ಟ್‌ವೇರ್ ಸಿ.ಡಿಯಿಂದ ಪಡೆಯಬೇಕಾದ ಪ್ರಯುಕ್ತ ತಕ್ಷಣ ನಿಗಧಿತ ದಿನಾಂಕದೊಳಗೆ ಅರ್ಜಿಗಳ ಜೊತೆಗೆ ಸಿ.ಡಿ ಸಲ್ಲಿಸತಕ್ಕದ್ದು.

12 ಮುದ್ರಿತ ನಮೂನೆಗಳು ಪ್ರಶ್ನೆಪತ್ರಿಕೆ/ಸೈದ್ಧಾಂತಿಕ (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ ತಕ್ಷಣ ನಿಗದಿತ ದಿನಾಂಕ: 21–12–2016 ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

13 (ಅ) ಹೆಚ್ಚಿನ ವಿದ್ಯಾರ್ಥಿಗಳು ಕೈಬರಹದಲ್ಲಿ ಪರೀಕ್ಷಾ ಅರ್ಜಿ ಭರ್ತಿ ಮಾಡುವಾಗ ತಪ್ಪು ತಪ್ಪಾಗಿ ಮಾಹಿತಿ ನೀಡುವ ಕಾರಣ ಅದರಂತೆಯೇ ಕಾಲೇಜಿನಲ್ಲಿ ಅಭ್ಯರ್ಥಿನ ಪಟ್ಟಿ ತಯಾರಿಸುವಾಗ ಬಳಸುವ ಕಾರಣದಿಂದ ಫಲಿತಾಂಶದಲ್ಲಿಯೂ ತಪ್ಪು (ಹಾಜರಿ/ಗೈರುಹಾಜರಿ/ನೋಂದಣಿ ಸಂಖ್ಯೆ/ಇತ್ಯಾದಿ) ಆಗುವುದನ್ನು ಗಮನಿಸಲಾಗಿದೆ. ಆದ್ದರಿಂದ ಈ ಬಾರಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಇಂಟರ್‌ನೆಂಟ್ ಮೂಲಕ ತಮ್ಮ ನೋಂದಣಿ ಸಂಖ್ಯೆಗನುಗುಣವಾಗಿ ಮಾಹಿತಿ ಹೊಂದಿದ ಅರ್ಜಿಯನ್ನು **Download** ಮಾಡಿಕೊಂಡು ಅದನ್ನೆ ಸಂಬಂಧಿಸಿದ ಕಾಲೇಜಿಗೆ ವಿದ್ಯಾರ್ಥಿ ಸಹಿ ಮಾಡಿ ಫೀ ಪಾವತಿಸಿ ಸಲ್ಲಿಸತಕ್ಕದ್ದು.(ಈ ಬಾರಿ ತಮ್ಮಲ್ಲಿ ದಾಸ್ತಾನು ಇರುವ ಪರೀಕ್ಷಾ ಅರ್ಜಿಗಳನ್ನು ಸಹ ಬಳಸಕೂಡದು.)

14 **(ಅ)** ಪ್ರಶ್ನೆಪತ್ರಿಕೆ ಇಂಡೆಂಟ್‌ಗಳನ್ನು ಅಭ್ಯರ್ಥಿ ಪಟ್ಟಿಯಲ್ಲಿನ ಮಾಹಿತಿ ಪ್ರಕಾರ ಸಾಫ್ಟ್‌ವೇರ್ ಮೂಲಕ ಪ್ರಿಂಟಿಂಗ್ ಪ್ರೆಸ್‌ಗೆ ಕ್ರೂಢೀಕರಿಸಿ ವಿಶ್ವವಿದ್ಯಾನಿಲಯದಿಂದ ಸಲ್ಲಿಸಬೇಕು. ಈ ಕಾರಣದಿಂದ ಕಂಡಿಕೆ 06ರಲ್ಲಿ ನಮೂದಿಸಿದ ದಿನಾಂಕದಂದೇ ತಪ್ಪದೇ ಸಲ್ಲಿಸತಕ್ಕದ್ದು, ಅಲ್ಲದೇ ತಾವು ಸಲ್ಲಿಸಿದ ಸಿ.ಡಿಯಲ್ಲಿನ ಮಾಹಿತಿ ಆದರಿಸಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಬಂಡಲ್‌ಗಳನ್ನು ಮಾಡಬೇಕಾದ ಕಾರಣ ಸೂಕ್ತ ಗಮನಹರಿಸಬೇಕು. ಇಲ್ಲವಾದಲ್ಲಿ ಮುಂದೆ ಒದಗುವ ತೊಂದರೆ ಮತ್ತು ಅನಾವಶ್ಯಕ ವೆಚ್ಚಕ್ಕೆ ಪ್ರಾಚಾರ್ಯರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. (ದಯವಿಟ್ಟು ಗಮನಿಸಿ)

**(ಆ)** ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ದಯವಿಟ್ಟು ವಿದ್ಯಾರ್ಥಿಗಳಿಗೆ ಇದನ್ನು ತಿಳಿಸಿರಿ.

**(ಇ)** ಈ ಪ್ರಕಟಣೆಯೊಂದಿಗೆ ಅಭ್ಯರ್ಥಿನ ಪಟ್ಟಿ ತಯಾರಿಸುವ ಸಲುವಾಗಿ ಸಾಫ್ಟ್‌ವೇರ್ ಸಿ.ಡಿ.ಯನ್ನು ಸಹ ಇದರೊಟ್ಟಿಗೆ ಕಳುಹಿಸಿದೆ. ಪ್ರತಿ ದಿನವೂ ಸಹ ಅಂದಿನ ಅರ್ಜಿಗಳನ್ನು ಅಂದೆ ಸಾಫ್ಟ್‌ವೇರ್‌ಗೆ Entry ಮಾಡಬೇಕು.ಇದರಿಂದ ನಿಗಧಿತ ದಿನಾಂಕದ ಮೊದಲೇ ಸಲ್ಲಿಸಲು ಅನುಕೂಲವಾಗುತ್ತದೆ.

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577002

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ ಸೆಮಿಸ್ಟರ್ ಹಾಗೂ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1 ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2 ಆಪ್ತಶಾಖೆ,ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ),ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3 ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4 ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5 ಕಛೇರಿ ಪ್ರತಿ.